ದಿನಾಂಕಃ **20-06-2025** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಾದ ಶ್ರೀ ಎಸ್**.**ಕೆ**.**ಎಸ್**.**ರವರಿಂದ ಃ

**1.** ನಾನು 8ನೇ ತರಗತಿ ಓದಿದ್ದೇನೆ. ನಾನು ವ್ಯವಸಾಯಗಾರ. ನಾನು ಮೂಲತಹ ಅರಳುಕುಪ್ಪೆ ಗ್ರಾಮದವನು. ನನಗೆ ಸೇರಿದ ಬಿ.ಪಿ.ಎಲ್. ಕಾರ್ಡ್ ಇದೆ. 2006 ರಿಂದ ಪ್ರತಿವಾದಿ ಪರಿಚಯ. ಪಟಾರಿಗೌಡ ಬಿನ್ ಸಿದ್ದೇಗೌಡ ನನ್ನ ತಂದೆ. ನಾನು ಮತ್ತು ನನ್ನ ತಂದೆ ಅನ್ಯೂನ್ಯವಾಗಿದ್ದೆವು. ಪ್ರತಿವಾದಿ ತಮ್ಮ ಸ್ವತ್ತನ್ನು ನನ್ನ ತಂದೆಗೆ ಭೋಗ್ಯ ಮಾಡಿರುವ ವಿಚಾರ ಗೊತ್ತು. ಸರ್ವೇ ನಂಃ172/1, 172/2, 172/3 ಸ್ವತ್ತುಗಳನ್ನು ಭೋಗ್ಯ ಮಾಡಿದ್ದಾರೆ. ನನ್ನ ತಂದೆ ತೀರಿಕೊಂಡ ನಂತರ ನಾನು ಭೋಗ್ಯದ ಸ್ವತ್ತುಗಳಲ್ಲಿ ಸ್ವಾದೀನದಲ್ಲಿದ್ದೇನೆ ಎಂದರೆ ಸರಿ. ಸದರಿ ವಿಚಾರವನ್ನು ನನ್ನ ವಾದಪತ್ರದಲ್ಲಿ ಹೇಳಿಲ್ಲ ಎಂದರೆ ಸರಿ. ಸರ್ವೇ ನಂಃ172/1, 172/2, 172/3ರ ಸ್ವತ್ತುಗಳನ್ನು ಹೊರತುಪಡಿಸಿ ಪ್ರತಿವಾದಿಗೆ ಸೇರಿದ ಇತರೆ ಸ್ವತ್ತುಗಳು ಅರಳಗುಪ್ಪೆ ಗ್ರಾಮದಲ್ಲಿ ಇವೆ. ನನ್ನ ವಕೀಲರಿಗೆ ನಾನೇ ದಾವೆ ಸಲ್ಲಿಸಲು ಮಾಹಿತಿ ನೀಡಿದೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ವ್ಯವಸಾಯ ಉದ್ದೇಶಕ್ಕಾಗಿ ಸಾಲ ಕೊಟ್ಟಿದ್ದೇನೆ ಎಂದು ಹೇಳಿದ್ದು, ಸ್ವತ್ತುಗಳ ಸರ್ವೇ ನಂಬರ್ ಗೊತ್ತಿಲ್ಲ. ಪ್ರತಿವಾದಿಯು ಸಾಲ ಕೇಳಲು ದಿಃ05.07.2021ರ ಒಂದು ವಾರದ ಮುಂಚೆ ಬಂದಿದ್ದರು. ಪ್ರತಿವಾದಿ ನಮ್ಮ ಊರಿನ ಮಹದೇವ್ ಎಂಬುವವರ ಜೊತೆ ಬಂದಿದ್ದರು. ಸರಿದ ವಿಚಾರವನ್ನು ನನ್ನ ವಾದ ಪತ್ರ ಮತ್ತು ಮುಖ್ಯ ವಿಚಾರಣೆಯಲ್ಲಿ ಹೇಳಿಲ್ಲ. ಸಾಕ್ಷಿಯು ಎಸ್. ಮಹದೇವ್ ಗೆ ನಾನು ಹಣವನ್ನು ಕೊಟ್ಟೆ, ಅವರೆ ನನಗೆ ಪ್ರತಿವಾದಿಯಿಂದ ನಿಪಿ-1 ಮತ್ತು 2 ನ್ನು ಬರೆಸಿಕೊಟ್ಟರು. ಪ್ರತಿವಾದಿಯು ಹಣವನ್ನು ಅರಳುಕುಪ್ಪೆ ಅರಳಿಮರದ ಹತ್ತಿರ ಕೇಳಿದ್ದರು. ನನ್ನ ಬಳಿ ಪ್ರತಿವಾದಿಗೆ ಸಾಲ ಕೊಡಲು ರೂ.1 ಲಕ್ಷ ಇತ್ತೆಂದು ತೋರಿಸಲು ದಾಖಲೆ ಇಲ್ಲ. ರೂ.500/- ಮುಖಬೆಲೆಯ ಒಟ್ಟು 200 ನೋಟುಗಳನ್ನು ಕೊಟ್ಟೆ. ಪ್ರತಿವಾದಿಗೆ ಹಣವನ್ನು ಪತ್ರ ಬರಹಗಾರರಾದ ಮಹದೇವಪ್ಪರವರ ಬಳಿ ಹಣ ಕೊಟ್ಟೆ. ಮಹದೇವಪ್ಪರವರ ಕಛೇರಿ ನ್ಯಾಯಾಲಯದಿಂದ ಸ್ವಲ್ಪ ದೂರದಲ್ಲೇ ಪೆಟ್ಟಿಗೆ ಅಂಗಡಿ ಇದ್ದು, ಅಲ್ಲೇ ಇದೆ. ಮಹದೇವಪ್ಪ ಈಗ ತೀರಿಕೊಂಡಿದ್ದಾರೆ. ಪ್ರತಿವಾದಿಯು ಒಂದು

ವರ್ಷದ ಒಳಗೆ ಸಾಲ ಮರುಪಾವತಿಸುವುದಾಗಿ ಹಣ ಕೇಳಿದ್ದ. ನಾನು ಒಂದು ವರ್ಷದ ನಂತರ ಆತನನ್ನು ಹಣ ಕೇಳಿದ್ದೆ, ಆತ ಕೊಡಲಿಲ್ಲ, ನಾನು ಸುಮ್ಮನಾದೆ. ನಾನು ಲೇವಾದೇವಿ ವ್ಯವಹಾರ ಮಾಡುವುದಿಲ್ಲ. ನನ್ನ ವಾದ ಪತ್ರದಲ್ಲಿ ಬಡ್ಡಿಯ ಬಗ್ಗೆ ನಮೂದಿಸಿದ್ದೇನೆ ಎಂದರೆ ಸರಿ. ಪ್ರತಿವಾದಿಯು ಜಮೀನು ಮಾರಿ ಹಣ ಕೊಡುವುದಾಗಿ ಹೇಳುತ್ತಿದ್ದ, ಆ ಕಾರಣ ಸುಮ್ಮನಾದೆ. ಪ್ರತಿವಾದಿಯು ನಿಪಿ-1 ಮತ್ತು 2 ನ್ನು ಬರೆದು ಕೊಟ್ಟಿಲ್ಲ, ನನ್ನಿಂದ ಹಣ ಸಹ ಪಡೆದಿಲ್ಲ ಎಂದರೆ ಸರಿಯಲ್ಲ. ಪತ್ರಗಾರ ಮತ್ತು ಸಾಕ್ಷಿದಾರರೊಂದಿಗೆ ಶಾಮೀಲಾಗಿ ಸುಳ್ಳು ದಾವೆ ಹೂಡಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯು ನಿಪಿ-1 ಮತ್ತು 2ರ ನಮೂನೆಯನ್ನು ದಿಃ05.07.2021 ರಂದು ತಂದರು. ನಿಪಿ-1 ಮತ್ತು 2ನ್ನು ಅದೇ ದಿನ ಮದ್ಯಾಹ್ನ 12.00 ಗಂಟೆ ಸಮಯದಲ್ಲಿ ಬರೆದರು. ಸಾಕ್ಷಿದಾರರನ್ನು ಪ್ರತಿವಾದಿಯೇ ಕರೆದುಕೊಂಡು ಬಂದಿದ್ದರು. ಸಾಕ್ಷಿದಾರರು ನನಗೂ ಸಹ ಪರಿಚಿತರು. ನಿಪಿ-1 ಮತ್ತು 2ನ್ನು ನಾನೇ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯು ಜಮೀನನ್ನು ಬಿಟ್ಟುಕೊಡಲು ಕೇಳಿದಾಗ ಈ ದಾವೆಯನ್ನು ಸುಳ್ಳಾಗಿ ಹಾಕಿದ್ದೇನೆ ಎಂದರೆ ಸರಿಯಲ್ಲ.

**2.** ನಿಪಿ-1 ಮತ್ತು 2ರಲ್ಲಿರುವ ಸಹಿ ಪ್ರತಿವಾದಿಯದ್ದಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯು ನನ್ನಿಂದ ಹಣ ಪಡೆಯಲು ಯಾವುದೇ ಅವಶ್ಯಕತೆ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ಮತ್ತು ಪ್ರತಿವಾದಿಯ ನಡುವೆ ಯಾವುದೇ ಹಣದ ವ್ಯವಹಾರ ನಡೆದಿಲ್ಲದ ಕಾರಣ ಪ್ರತಿವಾದಿಯು ಯಾವುದೇ ಹಣ ಕೊಡಲು ಬಾದ್ಯರಲ್ಲ ಎಂದರೆ ಸರಿಯಲ್ಲ. ಈ ದಾವೆಯು ಕಾಲಪರಿಮಿತಿಯೊಳಗೆ ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ. ಹೇ. ಕೇ. ಸ. ಇದೆ.**

**ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,**
**ಪಾಂಡವಪುರ.**

**ಸಾಕ್ಷಿದಾರರ ಸಹಿ.**